**<u>ಸಾಕ್ಷಿಗೆ ದಿನಾಂಕ 15-07-2023 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಪಾಟೀ ಸವಾಲುಃ ತೀರ್ಪುಋಣಿಗಾರರ (ಜೆ.ಡಿ.ಆರ್) ಪರ ಶ್ರೀ.ವಿ.ಎಸ್.ಕೆ. ವಕೀಲರಿಂದಃ</u>**

ನನ್ನ ತಾಯಿ 1ನೇ ತೀರ್ಪುಋಣಿಗಾರ ಮತ್ತು ಇತರರ ವಿರುದ್ದ ಕಬ್ಜಾಗೆ ತೊಂದರೆ ನೀಡುತ್ತಿದುದ್ದರಿಂದ ದಾವೆಯನ್ನು ಸಲ್ಲಿಸಿರುತ್ತೇನೆ. ದಾವೆಯನ್ನು ನಾವು ನಾವು ಪ್ರತಿಬಂಧಕ ಆಜ್ಞೆ ಆದೇಶಕ್ಕಾಗಿ ಮಾತ್ರ ಸಲ್ಲಿಸಿದ್ದೇವು ಎಂದರೆ ಸರಿಯಲ್ಲ.

ನಮ್ಮ ದಾವೆ ಡಿಕ್ರಿಯಾದ ನಂತರ ತೀರ್ಪುಋಣಿಗಾರರು ಒಂದು ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿಯನ್ನು ಮೇಲ್ಮನವಿ ನ್ಯಾಯಾಲಯದ ಪುರಸ್ಕರಿಸಿತ್ತು ಎಂದರೆ ಸರಿ. ಸದರಿ ಮೇಲ್ಮನವಿ ನ್ಯಾಯಾಲಯದ ಆದೇಶದ ವಿರುದ್ದ ನಾವು ಗೌರವಾನ್ವಿತ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿದ್ದೇವು ಎಂದರೆ ಸರಿ.

ತೀರ್ಪುಋಣಿಗಾರರು ಈಗಲೂ ನನ್ನ ಕಬ್ಜಾಕ್ಕೆ ತೊಂದರೆ ನೀಡುತ್ತಿದ್ದಾರೆ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 15-01-2021 ರಂದು ತೀರ್ಪುಋಣಿಗಾರರು ದಾವಾ ಆಸ್ತಿಗೆ ಬಂದು ನಮ್ಮ ಕಬ್ಜೆಗೆ ತೊಂದರೆ ನೀಡುತ್ತಿದ್ದಾರೆ ಎಂದು ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 15-01-2021 ರಂದು ನಾನು ಪೊಲೀಸರ ನೆರವು ಕೇಳಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯ ಆದೇಶ ನೀಡಿದ ನಂತರ ತೀರ್ಪುಋಣಿಗಾರರು ದಾವಾ ಆಸ್ತಿಗೆ ಹೋಗಿರುವುದಿಲ್ಲ ಮತ್ತು ನಮ್ಮ ಕಬ್ಜೆಗೆ ತೊಂದರೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ನಾವು ತೀರ್ಪುಋಣಿಗಾರರ ವಿರುದ್ಧ ಕೇವಲ ಪ್ರತಿಬಂಧಕ ಆಜ್ಞೆ ಆದೇಶಕ್ಕಾಗಿ ಕೋರಿದ್ದು, ನಮಗೆ ಈ ಅಮಲಜಾರಿ ಅರ್ಜಿಯನ್ನು ಸಲ್ಲಿಸಲು ಯಾವುದೇ ಹಕ್ಕು ಅಥವಾ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ತೀರ್ಪುಋಣಿಗಾರಿಗೆ ತೊಂದರೆ ನೀಡಲು ನಾನು ಒಂದು ಸುಳ್ಳು ಅಮಲ ಜಾರಿ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.